ದಿನಾಂಕ 10.12.2021 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ಪತ್ಯರ್ಜಿದಾರರ ಪರವಾಗಿ ಶ್ರೀ.ಎ.ಸಿ.ಆರ್. ವಕೀಲರಿಂದಃ</u>**

7. ನಾನು ಅಪಘಾತದ ಸಮಯ ಮತ್ತು ಸಂದರ್ಭದಲ್ಲಿ ನನ್ನ ಚಾಲನಾ ಪರವಾನಗಿಯನ್ನು ಪಡೆಯುವ ಸಲುವಾಗಿ ಆರ್.ಟಿ.ಓ. ಕಛೇರಿಗೆ ಹೋಗುತ್ತಿದ್ದೆನು. ನಾನು ಹೋಗುತ್ತಿದ್ದ ವಾಹನವು ನನ್ನ ಅಳಿಯನ ಹೆಸರಿನಲ್ಲಿ ದಾಖಲಾಗಿತ್ತು. ಸದರಿ ವಾಹನ ಕುರಿತಂತೆ ನಾನು ಆರ್.ಸಿ. ಪುಸ್ತಕ, ವಿಮಾ ಮತ್ತು ಇತರ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

8. ನನಗೆ ಈಗ 68 ವರ್ಷ ಪ್ರಾಯ. ನಾನೇ ಹಾಜರುಪಡಿಸಿರುವ ದಾಖಲಾತಿ ಪ್ರಕಾರ ನನ್ನ ಜನ್ಮ ವರ್ಷ 1951 ಎಂದರೆ ಸರಿ. ವಿವಾದಾಸ್ಪದ ಅಪಘಾತ ನನ್ನ ಅಜಾಗರೂಕತೆ ತಪ್ಪಿನಿಂದಲೇ ಸಂಭವಿಸಿದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳ ರಾಷ್ಟ್ರೀಯ ಹೆದ್ದಾರಿ ಸ್ಥಳ ಎಂದರೆ ಸರಿ. ಆ ರಸ್ತೆಯಲ್ಲಿ ಸಾಕಷ್ಟು ವಾಹನ ಓಡಾಡುತ್ತವೆ ಎಂದರೆ ಸರಿ. ನಾನೇ ರಸ್ತೆ ದಾಟಲು ಹೋಗಿ ನನ್ನ ಅಜಾಗರೂಕತೆಯಿಂದ ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪುನಃ ಹೇಳುತ್ತೇನೆ ನಾನು ನಿಲ್ಲಿಸಿಕೊಂಡಿದ್ದ ವಾಹನಕ್ಕೆ ಎದುರುದಾರರ ವಾಹನ ಬಂದು ಅಪ್ಪಳಿಸಿ ಅಪಘಾತ ಸಂಭವಿಸಿರುತ್ತದೆ.

9. ನನ್ನ ಅಪಘಾತದಿಂದ ನನ್ನ ತಲೆಯ ಭಾಗ, ಬೆನ್ನು ಭಾಗ, ಸೊಂಟದ ಭಾಗ, ಭುಜ ಭಾಗ ಹಾಗು ಕಾಲುಗಳಿಗೆ ಪೆಟ್ಟಾಗಿರುತ್ತದೆ. ನಾನು ಅಪಘಾತದಿಂದ ಪ್ರಜ್ಞೆ ಕಳೆದುಕೊಂಡೆನು. ಪ್ರಜ್ಞೆ ಬಂದಾಗ ನಾನು ಬಿಜಿಎಸ್ ಆಸ್ಪತ್ರೆಯಲ್ಲಿ

ಇದ್ದೆನು. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ನನಗೆ ಸಂಭವಿಸಿದ್ದವು ಎನ್ನಲಾದ ಗಾಯಗಳು ಮತ್ತು ನಾನು ಚಿಕಿತ್ಸೆ ಪಡೆದ ಗಾಯಗಳು ಅಪಘಾತದ ಗಾಯಗಳಲ್ಲ ಎಂದರೆ ಸರಿಯಲ್ಲ. ನನಗೆ ಹೆಚ್ಚಿನ ವಯಸ್ಸಾಗಿರುವ ಕಾರಣ ತಲೆಸುತ್ತು ಬಂದು ಬೀಳುವ ಮುಖೇನ ಗಾಯಗಳು ಸಂಭವಿಸಿವೆ ಎಂದರೆ ಸರಿಯಲ್ಲ.

10. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ನನಗೆ ಯಾವುದೇ ಗಾಯ ತೊಂದರೆಗಳು ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಶಸ್ತ್ರಚಿಕಿತ್ಸೆಗೆ ಒಳಪಟ್ಟಿಲ್ಲ.

11. ನಾನು ಪ್ರತಿಪಾದಿಸಿದಂತೆ ಅಂದಾಜು ರೂ.1,50,000/- ಕ್ಕೂ ಮಿಗಿಲಾದ ಚಿಕಿತ್ಸಾ ವೆಚ್ಚವನ್ನು ನಾನು ಭರಿಸಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಅಪ್ಪಳಿಸಿದ ವಾಹನವು ಬೆಂಗಳೂರು ಕಡೆಗೆ ಚಲಿಸುತ್ತಿತ್ತು.

12. ನಾನು ವ್ಯವಸಾಯ ಮಾಡುತ್ತೇನೆ. 4 ಸೀಮೆ ಹಸುಗಳನ್ನು ಹೊಂದಿರುತ್ತೇನೆ. ನಾನು ಪ್ರತಿಪಾದಿಸಿರುವಷ್ಟು ಮಾಸಿಕ ಗಳಿಕೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ವರಮಾನ ಕುರಿತಂತೆ ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

13. ನನಗೆ ಈಗಾಗಲೇ ವಯಸ್ಸಾಗಿರುವ ಕಾರಣ ನನಗೆ ಇದೆ ಎನ್ನಲಾದ ನೋವು ಇತ್ಯಾದಿಗಳು ಹೆಚ್ಚಿನ ವಯೋ ಕಾರಣದ ನೋವು ಇತ್ಯಾದಿಗಳಾಗಿವೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನಾನು ಅಸತ್ಯ

ಪ್ರತಿಪಾದಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಮತ್ತು ಎದುರುದಾರರ ವಾಹನದ ಚಾಲಕನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.